


## ಸಿನಿಮಾ ವಿವರ ಮೊಬೈಲ್‌ನಲ್ಲಿ

ಬೆಂಗಳೂರಿನ ಮೊಬೈಲ್ ಸಲ್ಯೂಷನ್ ಸಂಸ್ಥೆ ಟೆಲೆಬ್ರಹ್ಮ 'ಇಂಟರ‍್ಯಾಕ್ಟ್' ಎಂಬ ಮೊಬೈಲ್ ಅಪ್ಲಿಕೇಶನ್ ಅನ್ನು ಬಿಡುಗಡೆ ಮಾಡಿದೆ. ಡೇಟಾ ಮತ್ತು ಕ್ಯಾಮೆರಾ ಮೊಬೈಲ್ ಇರುವವರು ಸಿನಿಮಾ ಪೋಸ್ಟರ್ ಚಿತ್ರವನ್ನು ಸೆರೆ ಹಿಡಿದರೆ ಆ ಸಿನಿಮಾದ ಪಾತ್ರವರ್ಗ, ನಿರ್ದೇಶಕ ಯಾರು, ಯಾವ ಥಿಯೇಟರ್‌ನಲ್ಲಿ ಪ್ರದರ್ಶನ ಕಾಣುತ್ತಿದೆ ಎಂಬ ವಿವರಗಳು ನಿಮ್ಮ ಮೊಬೈಲ್ ಪರದೆಯ ಮೇಲೆ ಮೂಡುತ್ತವೆ.

ಸಿನಿಮಾ ಪತ್ರಿಕೆ, ಪೋಸ್ಟರ್, ಹೋರ್ಡಿಂಗ್, ಫ್ಲೆಕ್ಸ್, ಟಿವಿ, ಆನ್‌ಲೈನ್ ಪೋಸ್ಟರ್ ಯಾವುದರ ಮೇಲೆ ನಿಮ್ಮ ಫೋನ್‌ನಲ್ಲಿ ಚಿತ್ರ ಸೆರೆ ಹಿಡಿದರೂ ಮಾಹಿತಿ ಲಭ್ಯ. ಇದು ಸಿನಿಮಾದ ವಿಮರ್ಶೆ, ಸಿನಿಮಾ ಕಚೇರಿ ವೆಬ್‌ಸೈಟ್ ಮಾಹಿತಿಯನ್ನೂ ನೀಡುತ್ತದೆ. ಜೊತೆಗೆ ಸಿನಿಮಾದ ಫೇಸ್‌ಬುಕ್, ಟ್ವಿಟ್ಟರ್, ಯೂಟ್ಯೂಬ್, ವಿಕಿಪೀಡಿಯಾ ಪೇಜ್‌ಗಳಿಗೆ ಸಂಪರ್ಕ ಕಲ್ಪಿಸುತ್ತದೆ.

ಇಂಟರ‍್ಯಾಕ್ಟ್.ಮೊಬಿ ಎಂದು ಮೊಬೈಲ್ ಬ್ರೌಸರ್‌ನಲ್ಲಿ ಕೀ ಮಾಡಿ ಇಂಟರ‍್ಯಾಕ್ಟ್ ಅಪ್ಲಿಕೇಶನ್ ಡೌನ್‌ಲೋಡ್ ಮಾಡಿಕೊಂಡರೆ ಸಾಕು. ಈ ಅಪ್ಲಿಕೇಶನ್ ತೆರೆದರೆ ಕ್ಯಾಮೆರಾ ತಾನಾಗಿಯೇ ಆನ್ ಆಗುತ್ತದೆ ಎನ್ನುತ್ತಾರೆ ಟೆಲೆಬ್ರಹ್ಮದ ಕಾರ್ಪೊರೇಟ್ ಕಮ್ಯುನಿಕೇಶನ್ ಮ್ಯಾನೇಜರ್ ಅಂಜನ್ ಜಯಸಿಂಹ.

## ಅಂತರ್‌ಜಾಲ ಸಂಪರ್ಕವಿಲ್ಲದ ವೆಬ್‌ಸೈಟ್

ಅಂತರ್‌ಜಾಲದ ಸಂಪರ್ಕವಿಲ್ಲದೇ ವೆಬ್‌ಸೈಟ್ ತೆರೆಯಲು ಸಾಧ್ಯವಾದರೆ... ಇದು ಸೂಪರ್‌ಸ್ಟಾರ್ ರಜನೀಕಾಂತ್ ಕುರಿತಾದ 'ಯಾವುದೂ ಅಸಾಧ್ಯವಲ್ಲ' ಎಂಬ ಜೋಕ್‌ನಂತೆ ಭಾಸವಾಗುತ್ತದೆ ಅಲ್ಲವೇ? 'ಆಲ್‌ಅಬೌಟ್‌ರಜನಿ.ಕಾಮ್' ಎಂಬ ವೆಬ್‌ಸೈಟ್ ಮೂಲಕ ಇದು ನಿಜವಾಗಿದೆ.

ಇದನ್ನು ತೆರೆದೊಡೆ 'ಅವರು ಸಾಮಾನ್ಯ ಮನುಷ್ಯ ಅಲ್ಲ. ಈ ವೆಬ್‌ಸೈಟ್ ರಜನಿ ಶಕ್ತಿಯ ಮೇಲೆ ನಡೆಯುತ್ತದೆ. ವೆಬ್‌ಸೈಟ್ ತೆರೆಯುವ ಒಂದೇ ಮಾರ್ಗವೆಂದರೆ ನಿಮ್ಮ ಅಂತರ್‌ಜಾಲ ಸಂಪರ್ಕವನ್ನು ಬಂದ್ ಮಾಡಿ' ಎಂಬ ಸಂದೇಶ ಬರುತ್ತದೆ.

ವೆಬ್‌ಸೈಟ್ ತೆರೆಯುವ ಟ್ಯಾಬ್ ನೀವು ಅಂತರ್‌ಜಾಲ ಸಂಪರ್ಕ ತಪ್ಪಿಸಿದರೆ ಮಾತ್ರ ಕಾರ್ಯನಿರ್ವಹಣೆ ಸಾಧ್ಯ. ಅಂದರೆ ನೆಟ್ ಕೇಬಲ್ ಅಥವಾ ವೈ-ಫಿಯನ್ನು ತೆಗೆದು ಹಾಕಿದ ನಂತರ ಸಂಪೂರ್ಣ ವೆಬ್‌ಸೈಟ್ ಅನಾವರಣಗೊಳ್ಳುತ್ತದೆ. ಮಧ್ಯೆ ಮತ್ತೆ ಅಂತರ್‌ಜಾಲ ಸಂಪರ್ಕಕ್ಕೆ ಯತ್ನಿಸಿದರೆ, 'ಅಯ್ಯೋ ಇದು ಅನಿರೀಕ್ಷಿತ. ಬ್ರೌಸ್ ಮಾಡುವುದನ್ನು ಮುಂದವರಿಸಲು ಅಂತರ್‌ಜಾಲ ಸಂಪರ್ಕ ಬಂದ್ ಮಾಡಿ' ಎಂಬ ಸಂದೇಶ ಬರುತ್ತದೆ. ವೆಬ್‌ಚಟ್ನಿಯ ಕ್ರಿಯೇಟಿವ್ ನಿರ್ದೇಶಕ ಗುರುಭಕ್ಷ್ ಸಿಂಗ್ ದೇಸಿಮಾರ್ಟಿನಿ.ಕಾಮ್‌ಗಾಗಿ ಇದನ್ನು ಅಭಿವೃದ್ಧಿಪಡಿಸಿದ್ದಾರೆ. ಇದು ಕ್ಲಿಷ್ಟಕರವಾದ ಅಲ್ಗೋರ್ಥಮ್ ಸೂತ್ರದ ಮೇಲೆ ಓಡುತ್ತಿದೆ.

## ಅತ್ತರೂ ಅರಿಯುವ ಟ್ವಿಟ್ಟರ್

ಚಲನೆಯನ್ನು ಗ್ರಹಿಸುವ ತಂತ್ರಜ್ಞಾನವನ್ನು ಬಹಳಷ್ಟು ಉಪಕರಣಗಳಲ್ಲಿ ಬಳಸಲಾಗಿದೆ. ಈಗ ಸ್ಯಾಮ್‌ಸಂಗ್ ತನ್ನ ಸ್ಮಾರ್ಟ್‌ಫೋನ್‌ನಲ್ಲಿ ಭಾವನೆಗಳನ್ನು ಗ್ರಹಿಸುವ ತಂತ್ರಜ್ಞಾನ ಬಳಸಿದೆ.

ಗೆಲಾಕ್ಸಿ ಎಸ್2ನಲ್ಲಿ ಈ ತಂತ್ರಜ್ಞಾನ ಬಳಸಲಾಗಿದ್ದು ಬಳಕೆದಾರರ ಭಾವನೆಗಳನ್ನು ಗುರುತಿಸಿ ಇದು ಕೆಲಸ ಮಾಡುತ್ತದೆ. ಅಂದರೆ ಟ್ವಿಟ್ಟರ್‌ನಲ್ಲಿ ಪೋಸ್ಟ್ ಮಾಡುವಾಗ ಪ್ರತಿಯೊಂದು ಪೋಸ್ಟ್ ಮುಂದೆ ಟ್ವೀಟ್ ಮಾಡಿದವರ ಭಾವನೆಗಳು ಕಾಣಿಸುತ್ತವೆ. ಅಂದರೆ ಕೋಪ, ದುಃಖ, ಜೋಂಪು ಮೊದಲಾದವುಗಳ ಜೊತೆ ಮದ್ಯ ಸೇವಿಸಿದರೂ ಇದು ಕಾಣಿಸಿಕೊಳ್ಳುತ್ತದೆ.

ಬಳಕೆದಾರ ಎಷ್ಟು ವೇಗವಾಗಿ ಕೀ ಮಾಡುತ್ತಾನೆ, ಯಾವ ಪ್ರಮಾಣದಲ್ಲಿ ಫೋನ್ ನಡುಗುತ್ತದೆ, ಎಷ್ಟು ಬಾರಿ ತಪ್ಪು ಟೈಪ್ ಮಾಡುತ್ತಾನೆ, ಯಾವ ಸಂಕೇತಗಳನ್ನು ಬಳಸುತ್ತಾನೆ ಎಂಬುದರ ಮೇಲೆ ಆತನ ಭಾವನೆಗಳನ್ನು ಸೆನ್ಸರ್ ಗ್ರಹಿಸುತ್ತದೆ. ಇದರಿಂದ ಪೋಸ್ಟ್ ಓದಿದ ಸ್ನೇಹಿತರು ಟ್ವೀಟ್ ಮಾಡಿದವನ ಭಾವನೆಗಳನ್ನು ತಿಳಿದುಕೊಳ್ಳಬಹುದು.

## ಚಲನೆ ಗ್ರಹಿಸುವ ವಿಂಡೋಸ್

ಕೈ ಆಡಿಸುವುದರಿಂದ ವಿಂಡೋಸ್ ಡೆಸ್ಕ್‌ಟಾಪ್ ಅನ್ನು ನಿಯಂತ್ರಿಸುವ ವ್ಯವಸ್ಥೆ ಶೀಘ್ರವೇ ಬರಲಿದೆ. ಮೈಕ್ರೋಸಾಫ್ಟ್ ಅಭಿವೃದ್ಧಿಪಡಿಸಿದ ವಿಂಡೋಸ್ 8 ನೋಟ್‌ಬುಕ್ ಬಿಲ್ಟ್‌ಇನ್ 'ಕೈನೆಕ್ಟ್' ಸೆನ್ಸರ್‌ಗಳನ್ನು ಹೊಂದಿದ್ದು ಇದು ಬಳಕೆದಾರರ ಚಲನೆಗಳನ್ನು ಗ್ರಹಿಸಿ ಕಾರ್ಯನಿರ್ವಹಿಸುತ್ತದೆ. ಸಣ್ಣ ಸಣ್ಣ ಸೆನ್ಸರ್‌ಗಳನ್ನು ಸಾಮಾನ್ಯವಾಗಿ ವೆಬ್‌ಕ್ಯಾಂ ಇರುವ ಜಾಗದಲ್ಲಿ ಪರದೆಯ ಮೇಲೆ ಸಾಲಾಗಿ ಕೂಡ್ರಿಸಲಾಗಿದೆ.

ಈ ಲ್ಯಾಪ್‌ಟಾಪ್ ಮೇಲಿರುವ 3-ಡಿ ನಿಯಂತ್ರಣಗಳಲ್ಲಿ ಪಿಸಿ ಗೇಮ್‌ಗಳ ಸೌಲಭ್ಯಗಳನ್ನೂ ನೀಡಬಲ್ಲವು. ಮೈಕ್ರೋಸಾಫ್ಟ್ ತನ್ನ ಕೈನೆಕ್ಟ್ ಎಸ್‌ಡಿಕೆ ಯನ್ನು ಡೆವಲೆಪರ್‌ಗಳಿಗೆ ನೀಡಿದ್ದು ಇದು ಡೆಸ್ಕ್‌ಟಾಪ್‌ಗೂ ಶೀಘ್ರವೇ ಬರಲಿದೆ. ಇದು 5.9 ಇಂಚು ದೂರದಲ್ಲಿ ಕೈಗಳಿಂದ ಚಲನೆ ಮಾಡಿದರೂ ಗ್ರಹಿಸುತ್ತದೆ.

ಎಲ್‌ಜಿ ಮತ್ತು ಸ್ಯಾಮ್‌ಸಂಗ್ ಹೊರತರಲಿರುವ ಸ್ಮಾರ್ಟ್ ಟೀವಿಗಳಲ್ಲಿ ಇದನ್ನೇ ಬಳಸಿಕೊಳ್ಳಲಾಗಿದ್ದು ಧ್ವನಿ ನಿಯಂತ್ರಕ ಹಾಗೂ ಟಚ್‌ಸ್ಕ್ರೀನ್ ರಿಮೋಟ್‌ಗಳೂ ಇರಲಿವೆ.

## ಚಿತ್ರಗಳಿಂದ ಅಕ್ಷರಕ್ಕೆ

ಚಿತ್ರಗಳಲ್ಲಿ ಅಡಗಿರುವ ಅಕ್ಷರಗಳನ್ನು ಕೂಡಾ ನೀವು ಓದಬಹುದು. ಫ್ರೀ-ಒಸಿಆರ್.ಕಾಂ ಅಕ್ಷರ ಗುರುತಿಸುವ ಉಚಿತ ಟೂಲ್.

ಈ ವೆಬ್‌ಸೈಟ್‌ಗೆ ಹೋಗಿ ಪಿಡಿಎಫ್, ಜೆಪಿಜಿ, ಜಿಫ್, ಟಿಫ್ ಅಥವಾ ಬಿಎಂಪಿ ಮಾದರಿಯಲ್ಲಿರುವ ಚಿತ್ರಗಳನ್ನು ಅಪ್‌ಲೋಡ್ ಮಾಡಿ. ಇದು ಚಿತ್ರದಲ್ಲಿರುವ ಅಕ್ಷರ, ವಾಕ್ಯಗಳನ್ನು ನಿಮಗೆ ಒದಗಿಸುತ್ತದೆ. ಇದನ್ನು ನೀವು ಎಡಿಟ್ ಕೂಡಾ ಮಾಡಬಹುದು.

ಈ ಟೂಲ್ ಇಂಗ್ಲಿಷ್ ಅಲ್ಲದೇ ಕೆಲವು ಯೂರೋಪ್‌ನ ಭಾಷೆಗಳನ್ನು ಕೂಡಾ ನಿರ್ವಹಿಸುತ್ತದೆ. ಆದರೆ 2 ಎಂಬಿಗಿಂತ ಹೆಚ್ಚು ದೊಡ್ಡದಾಗಿರುವ ಚಿತ್ರಗಳನ್ನು ನೀವು ಅಪ್‌ಲೋಡ್ ಮಾಡಲು ಸಾಧ್ಯವಿಲ್ಲ. ಅಲ್ಲದೆ ಒಂದು ತಾಸಿಗೆ 10 ಚಿತ್ರಗಳನ್ನು ಮಾತ್ರ ಅಪ್‌ಲೋಡ್ ಮಾಡಬಹುದು. ಈ ವೆಬ್‌ಸೈಟ್‌ಗೆ ನೋಂದಣಿ ಮಾಡುವ ಅಗತ್ಯವಿಲ್ಲ.

■ ಎಸ್.ತುಂಬೆ